Prajavani 29-06-2022

# ಬಿಐಇಟಿಯಲ್ಲಿ ವಿಚಾರ ಸಂಕಿರಣ ಇಂದು

ದಾವಣಗೆರೆ: ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಕೆಮಿಕಲ್ ವಿಭಾಗದಿಂದ ಕೆಮೆಕ್ಸೆಲ್- 2022 ವಿಚಾರ ಸಂಕಿರಣ ಜೂನ್ 29ರಂದು ಬೆಳಿಗ್ಗೆ 10ಕ್ಕೆ ಕಾಲೇಜಿನ ಸಿವಿಲ್ ಸೆಮಿನಾರ್ ಹಾಲ್‌ನಲ್ಲಿ ನಡೆಯಲಿದೆ.

ಬೆಳಗಾವಿಯ ಆಕ್ವಾ ಆಲಾಯ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕ ಡಾ. ರಘುರಾಜ್ ಕೆ.ರಾವ್ ವಿಚಾರ ಸಂಕಿರಣವನ್ನು ಉದ್ಘಾಟಿಸುವರು. ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ಕೆಮಿಕಲ್ ವಿಭಾಗದ ಮುಖ್ಯಸ್ಥ ಡಾ.ಸಿ. ಆರ್. ಕಲ್ಲೇಶಪ್ಪ, ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಸಂಘಟನಾ ಕಾರ್ಯದರ್ಶಿ ಡಾ. ಡಿ.ಜಿ. ಪ್ರವೀಣ್ ಕುಮಾರ್ ಭಾಗವಹಿಸಲಿದ್ದಾರೆ.

ಸಂಜೆ 4.30ಕ್ಕೆ ಸಮಾರೋಪ ಕಾರ್ಯಕ್ರಮ ನಡೆಯಲಿದ್ದು, ಕುಮಾರಪಟ್ಟಣಂ ಹರಿಹರ ಪಾಲಿಫೈಬರ್ ಲಿಮಿಟೆಡ್‌ನ ತಾಂತ್ರಿಕ ಕೋಶ ವ್ಯವಸ್ಥಾಪಕ ಎಸ್.ಜಿ. ಪಂಚಾಕ್ಷರಿ, ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ ಭಾಗವಹಿಸುವರು. ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಇಂಡಕ್ಷನ್ ಉದ್ಘಾಟನೆ ಇಂದು

ದಾವಣಗೆರೆ: ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಡಿಆರ್‌ಆರ್ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಇಂಡಕ್ಷನ್ ಉದ್ಘಾಟನಾ ಕಾರ್ಯಕ್ರಮ ಜೂನ್ 29ರಂದು ಬೆಳಿಗ್ಗೆ 10ಕ್ಕೆ ಪಾಲಿಟೆಕ್ನಿಕ್ ಆವರಣದಲ್ಲಿ ನಡೆಯಲಿದೆ. ಹರಿಹರ ವಿವೇಕಾನಂದ ಮಠದ ಶಾರದಾನಂದ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಚಾರ್ಯ ಜಿ.ಬಿ. ಸದಾನಂದಪ್ಪ ಅಧ್ಯಕ್ಷತೆ ವಹಿಸುವರು. ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಹೊಳಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ವಿದ್ಯಾರ್ಥಿಗಳಿಗೆ ಬೇಕು ಸಂಘಟನೆ ಗುಣ, ಕೌಶಲ

30-06-2022

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ವಿದ್ಯಾರ್ಥಿಗಳು ತರಗತಿಯೊಳಗಿನ ಕಲಿಕೆ ಜತೆಗೆ ಸಂಘಟನೆ ಗುಣ ಮತ್ತು ಕೌಶಲಗಳನ್ನು ಬೆಳೆಸಿಕೊಂಡರೆ ಭವಿಷ್ಯದಲ್ಲಿ ನೆರವಾಗುತ್ತದೆ ಎಂದು ಬೆಳಗಾವಿಯ ಅಕ್ವಾ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಡಾ.ರಘುರಾಜ ಕೆ.ರಾವ್ ಹೇಳಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ, ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಿಂದ ಹಮ್ಮಿಕೊಂಡಿದ್ದ, ವಿದ್ಯಾರ್ಥಿಗಳ ಕಮ್ಮಟ 'ಕೆಮೆಕ್ಸೆಲ್' ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಹೊಸ ವಿಚಾರಗಳು ತಿಳಿಯುತ್ತವೆ. ಜ್ಞಾನ ವೃದ್ಧಿಯಾಗುತ್ತದೆ, ಇತರ ವಿದ್ಯಾರ್ಥಿಗಳ ಜತೆಗೆ ಬೆರೆತಾಗ ಅವರ ಆಲೋಚನಾ ಕ್ರಮ ಅರ್ಥವಾಗುತ್ತದೆ, ಪ್ರಾಜೆಕ್ಟ್‌ಗಳ ಬಗ್ಗೆ ತಿಳಿಯುತ್ತದೆ ಎಂದರು.

ಈ ರೀತಿಯ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಅಗತ್ಯವಾಗಿದೆ. ಸೋಲು, ಗೆಲುವಿಗಿಂತ ಇಲ್ಲಿ ನಡೆಯುವ ಸಂವಾದದಿಂದ ಬಹಳಷ್ಟು ಲಾಭ ಪಡೆಯಬಹುದು. ಹೊರ ಪ್ರಪಂಚದ ಬಗ್ಗೆ ಅರಿವು ಬೆಳೆಯುತ್ತದೆ ಎಂದು ತಿಳಿಸಿದರು.

ಹಿರಿಯ ಪ್ರಾಧ್ಯಾಪಕ ಡಾ.ಕೆ. ಸದಾಶಿವಪ್ಪ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಉದ್ಯೋಗ ಪಡೆಯುವುದಕ್ಕೆ ಸೀಮಿತರಾಗದೇ ಸ್ವಂತ ಉದ್ಯಮ ಸ್ಥಾಪಿಸಿ ಇತರರಿಗೆ ಕೆಲಸ ನೀಡುವ ಮಟ್ಟಕ್ಕೆ ಬೆಳೆಯಬೇಕು. ಸಮಯ ಪಾಲನೆ ಮಾಡಬೇಕು ಎಂದು ಸಲಹೆ ನೀಡಿದರು.




ದಾವಣಗೆರೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ, 'ಕೆಮೆಕ್ಸೆಲ್' ವಿದ್ಯಾರ್ಥಿಗಳ ಕಮ್ಮಟವನ್ನು ಬೆಳಗಾವಿಯ ಅಕ್ವಾ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಡಾ.ರಘುರಾಜ ಕೆ.ರಾವ್ ಉದ್ಘಾಟಿಸಿದರು. ಡಾ.ಕೆ.ಸದಾಶಿವಪ್ಪ, ಡಾ.ಜಿ.ಪಿ.ದೇಸಾಯಿ, ಡಾ.ಸಿ.ಎಂ. ಕಲ್ಲೇಶಪ್ಪ, ಡಾ.ಡಿ.ಜಿ.ಪ್ರವೀಣ ಕುಮಾರ್, ಸಂಕೇತ್ ಮಾಕನೂರು ಇದ್ದರು.

ಕಾರ್ಯಕ್ರಮ ಸಂಯೋಜಕ ಡಾ.ಸಿ.ಎಂ. ಕಲ್ಲೇಶಪ್ಪ ಮಾತನಾಡಿ, ರಾಜ್ಯದ ವಿವಿಧ ಕಾಲೇಜುಗಳಿಂದ ಬಂದ ವಿದ್ಯಾರ್ಥಿಗಳು ಈ ಕಮ್ಮಟದಲ್ಲಿ 27 ಪ್ರಬಂಧಗಳನ್ನು ಮಂಡಿಸುವರು. 17 ಪೋಸ್ಟರ್‌ಗಳ ಪ್ರದರ್ಶನ ನಡೆಯಲಿದೆ ಎಂದರು.

ಇಂಥ ವೇದಿಕೆಗಳಿಂದ ವಿದ್ಯಾರ್ಥಿಗಳ ಜ್ಞಾನ ವೃದ್ಧಿಯಾಗುತ್ತದೆ. ತಂತ್ರಜ್ಞಾನದ ಇತ್ತೀಚಿನ ಆವಿಷ್ಕಾರಗಳು ಇತ್ಯಾದಿ ವಿಚಾರಗಳು ತಿಳಿಯುತ್ತವೆ. 20 ವರ್ಷಗಳಿಂದ ಕೆಮೆಕ್ಸೆಲ್‌ನಂಥ ಕಾರ್ಯಕ್ರಮ ಆಯೋಜಿಸುತ್ತ ಬಂದಿದ್ದೇವೆ ಎಂದರು.

ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ.ದೇಸಾಯಿ, ಸಂಘಟನಾ ಕಾರ್ಯದರ್ಶಿ ಡಾ.ಡಿ.ಜಿ.ಪ್ರವೀಣ ಕುಮಾರ್, ಸಂಕೇತ್ ಮಾಕನೂರು ಇದ್ದರು. ಆಶಾ ವಂದಿಸಿದರು.

‘ಕೆಮೆಕ್ಸಲ್2022’ ಕಾರ್ಯಕ್ರಮದಲ್ಲಿ ಡಾ. ರಘುರಾಜ್ ಕೆ. ರಾವ್

# ವಿಚಾರಸಂಕಿರಣಗಳಿಂದ ಕೌಶಲ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ 30-06-2022

ದಾವಣಗೆರೆ: ವಿದ್ಯಾರ್ಥಿಗಳಲ್ಲಿ ಕೌಶಲ ಹೆಚ್ಚಲು ವಿಚಾರಸಂಕಿರಣಗಳು ಸಹಕಾರಿ ಎಂದು ಬೆಂಗಳೂರಿನ ಎಕೆಎಕ್ಸ್ಎ ಟೆಕ್ ಪ್ರೈವೆಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಡಾ. ರಘುರಾಜ್ ಕೆ. ರಾವ್ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಕೆಮಿಕಲ್ ಎಂಜಿನಿಯರಿಂಗ್ ವಿಭಾಗ ದಿಂದ ಬುಧವಾರ ಹಮ್ಮಿಕೊಂಡಿದ್ದ ‘ಕೆಮೆಕ್ಸಲ್-2022’ ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಮಾಲೋಚನೆ ಮಾಡುವುದರಿಂದ ಜ್ಞಾನವನ್ನು ಪರಸ್ಪರ ಹಂಚಿಕೊಳ್ಳಲು ಅವಕಾಶವಾಗುತ್ತದೆ. ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವು ದರಿಂದ ನಾಯಕತ್ವದ ಗುಣ,



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಿದ್ದ ಕೆಮೆಕ್ಸಲ್ –2022 ವಿಚಾರಸಂಕಿರಣವನ್ನು ಎಕೆಎಕ್ಸ್ಎ ಟೆಕ್ ಪ್ರೈವೆಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಡಾ. ರಘುರಾಜ್ ಕೆ. ರಾವ್, ಡಾ. ಸಿ.ಎಂ ಕಲ್ಲೇಶಪ್ಪ, ಪ್ರೊ. ಕೆ.ಸದಾಶಿವಪ್ಪ, ಜೆ.ಪಿ ದೇಸಾಯಿ, ಡಾ. ಪ್ರವೀಣಕುಮಾರ್ ಡಿ.ಜಿ. ಉದ್ಘಾಟಿಸಿದರು.

ಸಕಾರಾತ್ಮಕ ಚಿಂತನೆ ಬೆಳೆಯುತ್ತದೆ. ವಿಚಾರಸಂಕಿರಣಗಳು ಕೆಮಿಕಲ್ ವಿಭಾಗದ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ಬುನಾದಿಯಾಗುತ್ತದೆ ಎಂದು ತಿಳಿಸಿದರು.

ಎಂಜಿನಿಯರಿಂಗ್ ಮಾಡಿದ ಎಲ್ಲ ವಿದ್ಯಾರ್ಥಿಗಳು ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ಆದರೆ, ಉದ್ಯೋಗಿಗಳು ಆಗುವುದಕ್ಕಿಂತ ಸ್ವಂತ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗದಾತರಾಗಲು ಪ್ರಯತ್ನಿಸ ಬೇಕು ಎಂದು ಬಿಐಇಟಿ ಮೆಕಾನಿಕಲ್ ವಿಭಾಗದ ಪ್ರೊ. ಕೆ.ಸದಾಶಿವಪ್ಪ ಕಿವಿಮಾತು ಹೇಳಿದರು.

ಸಮಯಕ್ಕೆ ಹೆಚ್ಚು ಒತ್ತು ನೀಡಿ, ಸಂಶೋಧನಾ ಮನೋಭಾವ ಮೈಗೂಡಿಸಿಕೊಂಡು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಸ್ತುಗಳ ಬೇಡಿಕೆ, ವಿನ್ಯಾಸ, ಉತ್ಪಾದನೆ, ಸಾರಿಗೆ, ಮಾರುಕಟ್ಟೆ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಪ್ರತಿ ವರ್ಷ ಕಾರ್ಯಾಗಾರ ಆಯೋಜಿಸಲಾಗುತ್ತಿದ್ದು, ಇದು 20ನೇ ಕಾರ್ಯಾಗಾರ ಎಂದು ಕಾರ್ಯಕ್ರಮ ಆಯೋಜಕ ಡಾ.ಸಿ.ಎಂ. ಕಲ್ಲೇಶಪ್ಪ ತಿಳಿಸಿದರು.

ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಡಾ.ಜೆ.ಪಿ. ದೇಸಾಯಿ, ಡಾ.ಪ್ರವೀಣ್ ಕುಮಾರ್ ಡಿ.ಜಿ., ಸಂಕೇತ್ ಇದ್ದರು. ಶುಭಂ, ನಿಧಿ ಪ್ರಾರ್ಥಿಸಿದರು. ಚೈತ್ರಾ ಹಾಗೂ ಆಯ್ಮಾ ನಿರೂಪಿಸಿದರು. ಆಶಾ ವಂದಿಸಿದರು.

# ವಿಚಾರ ಸಂಕಿರಣಗಳಿಂದ ಕೌಶಲ್ಯತೆ ಹೆಚ್ಚಳ

## ಬಿಐಇಟಿಯ 'ಕೆಮೆಕ್ಸಲ್-2022' ವಿಚಾರ ಸಂಕಿರಣದಲ್ಲಿ ಡಾ.ರಘುರಾಜ್ ಕೆ.ರಾವ್

ದಾವಣಗೆರೆ, ಜು.6- ಕಾಲೇಜುಗಳಲ್ಲಿ ನಡೆಸುವ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಕೌಶಲ್ಯತೆ ಹೆಚ್ಚಾಗುತ್ತದೆ ಎಂದು ಬೆಂಗಳೂರಿನ ಅಕ್ವಾ ಟೆಕ್ ಪ್ರೈ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರೂ, ಅಕ್ವಾ ಅಲ್ಯೋಯಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕರೂ ಆದ ಡಾ.ರಘುರಾಜ್ ಕೆ. ರಾವ್ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ವಿಶ್ವೇಶ್ವರಾಯ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 'ಕೆಮೆಕ್ಸಲ್-2022' ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕೆಮಿಕಲ್ ವಿಭಾಗದ ವಿದ್ಯಾರ್ಥಿಗಳಿಗೆ ಈ ರಾಷ್ಟ್ರಮಟ್ಟದ ವಿಚಾರ ಸಂಕಿರಣವು ತಮ್ಮ ಮುಂದಿನ ಭವಿಷ್ಯಕ್ಕೆ ಬುನಾದಿಯಾಗಿದೆ. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳೂ ಸಹ ಇಲ್ಲಿ ಪಾಲ್ಗೊಳ್ಳುವುದರಿಂದ ಪರಸ್ಪರ ಸಮಾಲೋಚಿಸಲು ಸಹಕಾರಿಯಾಗಿದೆ ಎಂದರು.

ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆಯು ನಾಯಕತ್ವದ ಗುಣ, ಧನಾತ್ಮಕ ಚಿಂತನೆ ಬೆಳೆಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸದ್ವಿನಿಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಬಿಐಇಟಿ ಮೆಕ್ಯಾನಿಕಲ್ ವಿಭಾಗದ ಪ್ರೊ. ಕೆ.ಸದಾಶಿವಪ್ಪ ಮಾತನಾಡಿ, ಎಂಜಿನಿಯರಿಂಗ್ ಮಾಡಿದ ಎಲ್ಲಾ ವಿದ್ಯಾರ್ಥಿಗಳು ಸಾಮಾನ್ಯವಾಗಿ ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಉದ್ಯೋಗಿಗಳಾಗುವುದಕ್ಕಿಂತ ಸ್ವಂತ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗದಾತರಾಗಲು ಪ್ರಯತ್ನಿಸಬೇಕು ಎಂದು ಕಿವಿ ಮಾತು ಹೇಳಿದರು.




ಸಮಯ ಪಾಲನೆ ತಿಳಿಯದ ವಿದ್ಯಾರ್ಥಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಸಮಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಸದಾ ಸಂಶೋಧನಾ ಮನೋಭಾವ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಆಯೋಜಕ ಡಾ.ಸಿ.ಎಂ. ಕಲ್ಲೇಶಪ್ಪ ಮಾತನಾಡುತ್ತಾ, ವಸ್ತುಗಳ ಬೇಡಿಕೆ, ವಿನ್ಯಾಸ, ಉತ್ಪಾದನೆ, ಸಾರಿಗೆ, ಮಾರುಕಟ್ಟೆ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಈ ಕಾರ್ಯಾಗಾರದಲ್ಲಿ ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ರಾಜ್ಯದ ವಿವಿಧ ಭಾಗಗಳಿಂದ 27 ಓರಲ್ ಹಾಗೂ 17 ಪೋಸ್ಟರ್‌ಗಳನ್ನು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪ್ರಸ್ತುತಪಡಿಸಲಿದ್ದಾರೆ. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಪ್ರತಿ ವರ್ಷವೂ ಕಾರ್ಯಾಗಾರ ಆಯೋಜಿಸಲಾಗುತ್ತಿದ್ದು, ಇದು 20ನೇ ಕಾರ್ಯಾಗಾರವಾಗಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಡಾ.ಜಿ.ಪಿ. ದೇಸಾಯಿ, ಡಾ.ಪ್ರವೀಣ್ ಕುಮಾರ್ ಡಿ.ಜಿ., ಸಂಕೇತ್ ಉಪಸ್ಥಿತರಿದ್ದರು. ಚೈತ್ರ ಹಾಗೂ ಆಯ್ಕಾ ರೈ ನಿರೂಪಿಸಿದರು. ಶುಭಂ, ಪ್ರಕಾಶ್ ತೀರ್ಥ ಹಾಗು ನಿಧಿ ಪ್ರಾರ್ಥಿಸಿದರು. ಆಶಾ ವಂದಿಸಿದರು.